OS No.77/2021 PW-2

ದಿನಾಂಕ : 26.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು:- ಪ್ರತಿವಾದಿ ಪರ ಶ್ರೀ SSP ವಕೀಲರಿಂದ :-**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ವಚನದಲ್ಲಿ ಬರೆದ ವಿಷಯಳು ನನಗೆ ಗೊತ್ತಿರುತ್ತವೆ. ನನಗೆ ಓದಲು ಬರೆಯವುದಿಲ್ಲಾ. ದಾವಾ ಆಸ್ತಿ ಮನೆಯ ನಂಬರ ನನಗೆ ಗೊತ್ತಿಲ್ಲಾ. ದಾವಾ ಆಸ್ತಿ ಮನೆಯ ಚೆಕ್ ಬಂದಿ ಪೂರ್ವಕ್ಕೆ ಮುಸ್ಲಿಂ ರವರ ಮನೆ, ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ ಯೋಗೇಶ ಭೀಮಶಾ ರವರ ಮನೆ ಮತ್ತು ದಕ್ಷಿಣಕ್ಕೆ ಮುಸ್ಲಿಂ ರವರ ಮನೆ ಇರುತ್ತದೆ ಅವರುಗಳು ಹೆಸರು ಗೊತ್ತಿಲ್ಲಾ. ದಾವಾ ಆಸ್ತಿ ಈ ಮೊದಲು ನಿಂಗಪ್ಪ ರವರ ಹೆಸರಿಗೆ ಇತ್ತು ಎಂದರೆ ಸರಿ. ವಾದಿಯು ಸುಮಾರು 20 ವರ್ಷಗಳಿಂದ ಹಿಂಗಣಿ ಗ್ರಾಮದಲ್ಲಿ ಇದ್ದರು ಎಂದರೆ ಸರಿ. ಸದರಿಯವರು ಊರಲ್ಲಿ ಇಲ್ಲದ ಕಾರಣ ಪ್ರತಿವಾದಿಯವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಪ್ರತಿವಾದಿಯ ಗಂಡ ಗಜಾನನ 2020 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಯ ಮನೆಯಲ್ಲಿ ಪ್ರತಿವಾದಿಯು ಶ್ಯಾವೀಗೆ ಮಾಡುವ ಮಶೀನ ಇಟ್ಟುಕೊಂಡು ಉಪಜೀವನ ನಡೆಸುತ್ತಿದ್ದರು ಎಂದರೆ ಸಾಕ್ಷಿಯು ವಾದಿಗಳು ಬೇರೆ ಊರಿಗೆ ಹೋಗಿದ್ದರಿಂದ ಪ್ರತಿವಾಗಳು ಇಟ್ಟುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ದಾವಾ ಆಸ್ತಿಗೆ ಸಂಬಂಧಿಸಿದ ತೆರಿಗೆಯನ್ನು ಪ್ರತಿವಾದಿ ಭರಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿ ಭರಿಸಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯರ ಮಶೀನ ಮತ್ತು ಶೆಡ್ಡನ್ನು ವಾದಿಯು ತೆಗೆದು ಹಾಕಿ 2021 ರಲ್ಲಿ ನೆಲೆಸಿರುತ್ತಾನೆ ಎಂದರೆ ಸರಿ. ದಾವಾ ಆಸ್ತಿ ನಾನೇ ಮಾಲೀಕ ಮತ್ತು ಕಬ್ಜೆದಾರನಾಗಿದ್ದಾನೆ ಎಂದು ಈ ದಾವೆ ಹೂಡಿರುತ್ತಾನೆ ಎಂದರೆ ಸರಿ. ಪ್ರತಿವಾದಿ ಗಂಡ ತೀರಿಕೊಂಡಿದ್ದರಿಂದ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಹೂಡಿರುತ್ತಾನೆ ಎಂದರೆ ಸರಿಯಲ್ಲ.

OS No.77/2021 PW-2

ಈ ದಿನ ನನ್ನನ್ನು ವಾದಿಯು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರನೆ ಎಂದರೆ ಸರಿ. ಆದರಿಂದ ಆತನ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ-**ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ